ಅಸಲು ದಾವೆ ಸಂಖ್ಯೆ - 125/2016
ಡಿ.ಡಬ್ಲ್ಯೂ - 01
ದಿನಾಂಕ: 06-02-2025
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲು: ವಾದಿ ಪರ ಶ್ರೀ. ಎಮ್ ಎಸ್ ಎಮ್ ವಕೀಲರಿಂದ**

ನಿಮ್ಮ ವರ್ಗಾವಣೆ ಪತ್ರ ಈ ದಾವೆಯಲ್ಲಿ ಹಾಜರುಪಡಿಸಿಲ್ಲ ಎಂದರೆ ಹಾಜರುಪಡಿಸಿದ್ದೇನೆ. ದುರ್ಗವ್ವ ಎಂಬ ಹೆಸರಿನವರು ನಿಮ್ಮ ಊರಿನಲ್ಲಿ ಒಬ್ಬರೆ ಇದ್ದಾರೊ ಅಥವಾ ಬಹಳ ಜನ ಇದ್ದಾರೆ ಎಂದರೆ ಇರಬಹುದು. ಅದರೇ ರೀತಿಯಾಗಿ ದುರ್ಗಮ್ಮ ಎನ್ನುವರು ಇದ್ದಾರೆ ಎಂದರೆ ಇರಬಹುದು ಎಂದು ನುಡಿಯುತ್ತಾರೆ. ನಿಡಿ-13 ರು ನೀವು ಖೊಟ್ಟಿಯಾಗಿ ಸೃಷ್ಠಿಸಿಕೊಂಡು ಸಲ್ಲಿಸಿದ ದಾಖಲೆಯಾಗಿರುತ್ತದೆ ಎಂದರೆ ಸರಿಯಲ್ಲ. ವಾದಿಯ ಆಸ್ತಿಯನ್ನು ಎತ್ತಿ ಹಾಕುವ ಉದ್ದೇಶದಿಂದ ಸುಳ್ಳು ದಾಖಲೆಯನ್ನು ಸೃಷ್ಠಿಸಿ ಅದನ್ನು ನ್ಯಾಯಾಲಯಕ್ಕೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ನೀವು ಸಲ್ಲಿಸಿದ ಪ್ರತಿವಾದಿ ಪತ್ರದಲ್ಲಿ ತೋರಿಸಿದ ವಂಶಾಳಿಯು ಸತ್ಯಾಂಶದಿಂದ ಕೂಡಿರುವುದಿಲ್ಲ ಎಂದರೆ ಸರಿಯಲ್ಲ. ನಿಮಗೆ ಎಲ್ಲಾ ಗೊತ್ತಿದ್ದರೆ ಆ ವಂಶಾಳಿಯ ಎಲ್ಲಾ ಸದಸ್ಯರನ್ನು ಸಹ ಪಕ್ಷಗಾರರನ್ನಾಗಿ ಮಾಡುತ್ತಿದ್ದೀರಿ ಎಂದರೆ, ನಮಗೆ ಸಂಬಂಧಪಟ್ಟವರನ್ನು ಮಾತ್ರ ಪಕ್ಷಗಾರರನ್ನಾಗಿ ತೋರಿಸಿರುತ್ತೇನೆ. ನಿಮ್ಮ ವಂಶಾವಳಿಯಲ್ಲಿ ಮೂಲ ಪುರಷಯಾರು ಎಂದು ನಮೂದು ಮಾಡಿಲ್ಲ ಎಂದರೆ ಮಾಡಿರುತ್ತೇನೆ. ಪ್ರತಿವಾದಿ ಪತ್ರದಲ್ಲಿ ತೋರಿಸಿರುವ ವಂಶಾವಳಿಯಲ್ಲಿ ಇರುವ ವ್ಯಕ್ತಿಗಳಿಗೆ ದಾವಾ ಆಸ್ತಿಯಲ್ಲಿ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ಕೇವಲ ವಾದಿಯರು ಮಾತ್ರ ಹಕ್ಕುದಾರರು ಎಂದರೆ ಸುಳ್ಳು.

ವಂಶಾವಳಿಯ ಪ್ರಕಾರ ದಾವಾ ಆಸ್ತಿಯಲ್ಲಿ ನಿಮ್ಮ ಹೆಸರನ್ನು ಸೇರಿಸಲು ತಹಶೀಲ್ದಾರ ಸವಣೂರ ರವರಿಗೆ ಅರ್ಜಿಯನ್ನು ಸಲ್ಲಿಸಿದ್ದೀರಿ ಎಂದರೆ ಸರಿ. ದಾವಾ ಆಸ್ತಿಗೆ ನೀವು ಹಕ್ಕುದಾರರು ಅಲ್ಲಾ ಎಂದು ಸದರಿ ಅರ್ಜಿಯು ವಜಾಗೊಂಡಿರುತ್ತದೆ ಎಂದರೆ ವಾದಿಯರು ತಕರಾರು ಸಲ್ಲಿಸಿದ್ದರಿಂದ ವಜಾ ಗೊಂಡಿರುತ್ತದೆ. ಸದರಿ ಅರ್ಜಿಯನ್ನು ಪ್ರಶ್ನಿಸಿ ಉಪವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಮೇಲ್ಮಮವಿಯನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿ.

**ಮರು ವಿಚಾರಣೆ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು.ಸವಣೂರು.

OS No.125/2016   DW.1